

ಏಕತಾನತೆ ಕಾಡಿತೋ ಏನೋ? ಓದು, ಬರವಣಿಗೆ, ಅಧ್ಯಯನದಲ್ಲಿ ತೊಡಗಿಕೊಂಡಿದ್ದ ಜೀವವದು. ಕೊನೆಯ ದಿನಗಳಲ್ಲಿ ಓದು-ಬರವಣಿಗೆ ಕಡಿಮೆಯಾಗುತ್ತಲೆ ಬಂತು. ನಾನು ಎಂದಾದರೂ ಒಂದು ದಿನ ಮನೆಗೆ ಹೋಗದಿದ್ದರೆ ಅವರು ಬೇಜಾರು ಮಾಡಿಕೊಳ್ಳುತ್ತಿದ್ದರು. ಸೊಸೆ ಶಿವಗೀತ ಅವರಿಗೆ, 'ಮಹಾಂತ ಬಂದಾನ. ಚಹಾ ತಂದುಕೊಡಮ್ಮ' ಎಂದು ಸಂಭ್ರಮಿಸುತ್ತಿದ್ದರು. ಶಿವಗೀತ ಅಕ್ಕ ಬಂದವರಿಗೆ ಆತಿಥ್ಯ ಕೊಡುವುದರಲ್ಲಿ ಎಂದೂ ಹಿಂದೆಬೀಳಲಿಲ್ಲ. ಶಾಂತರಸರನ್ನು ತಂದೆಯಂತೆ ಬಹುವಾಗಿ ಜೋಪಾನ ಮಾಡಿದ ಜೀವವದು.

ಒಂದು ದಿನ ನಾನು ಕಾರ್ಯನಿಮಿತ್ತ ಶಹಪುರಕ್ಕೆ ಹೋಗಿದ್ದೆ. ಶಾಂತರಸರ ಫೋನ್ ಬಂತು. 'ನಾನು ಬಹುಶಃ ಉಳಿಯಲಿಕ್ಕಿಲ್ಲ. ಈ ದಿನವೇ ಕೊನೆಯಾಗಬಹುದು' ಎಂದರು. ನಾನು ಅವಸರ ಅವಸರವಾಗಿ ಬಂದಾಗ ಅವರು ಆರಾಮವಾಗಿ ಕುಳಿತಿದ್ದರು. 'ಯಾಕೆ ಸರ್, ಏನಾಯ್ತು? ನಿಮ್ಮ ಆರೋಗ್ಯ ಚೆನ್ನಾಗಿಯೇ ಇದೆಯಲ್ಲ?' ಎಂದೆ. 'ಸ್ವಲ್ಪ ಹೊಟ್ಟೆನೋವು ಇತ್ತು. ಈಗ ಆರಾಮವಾದೆ' ಎಂದರು. 'ಮಾಂತಪ್ಪ, ನೀನು ದಿನಕ್ಕೊಂದು ಸಲವಾದರೂ ನನ್ನ ಭೇಟಿಯಾಗಲೇಬೇಕು' ಎಂದು ಫರ್ಮಾನು ಹೊರಡಿಸಿದರು. ನಾನು ದಿನಾಲೂ ಸಂಜೆ ಅವರ ಮನೆಯಲ್ಲಿ ಕಳೆಯುತ್ತಿದ್ದೆ. ನನ್ನ ಕಚೇರಿಯ ಸಹಾಯಕ ಉದಯ್ ಅವರಿಗೂ ಶಾಂತರಸರ ಸೇವೆ ಮಾಡುವ ಭಾಗ್ಯ ದೊರಕಿತ್ತು.

ಸಾವಿನ ಸೂಚನೆ ಶಾಂತರಸರಿಗೆ ನಿಚ್ಚಳವಾಗಿತ್ತು ಅನ್ನಿಸುತ್ತದೆ. ಕೊನೆ ಕೊನೆಗೆ ಮೌನವ್ರತ ವಹಿಸಿದವರಂತೆ, ಕಣ್ಣಿನಿಂದಲೇ ಮಾತನಾಡುತ್ತಿದ್ದರು. 'ಬಂದವರು ಒಂದು ದಿನ ಮರಳಿ ಹೋಗಲೇಬೇಕಲ್ಲ' ಎಂದು ತಾವೇ ಬರೆದ ಗಜಲಿನಂತೆ, 2008ರ ಏಪ್ರಿಲ್ 13ರಂದು ಶಾಂತರಸರು ಹೋಗಿಯೇಬಿಟ್ಟರು; ನಮ್ಮ ಪಾಲಿಗೆ ಬೆಳಕಾಗಿ ಉಳಿದರು. ಎಸ್.ಜಿ. ಸ್ವಾಮಿ ಬರೆದ ಕವಿತೆಯ ಸಾಲುಗಳು ಶಾಂತರಸರನ್ನು ಬಲ್ಲ ಎಲ್ಲರ ಮನದ ಮಾತುಗಳಂತಿವೆ:

**ಹೆಸರು ಶಾಂತರಸ ಆದರೂ ನವರಸಗಳ ಲೋಕ**
**ತೆರೆದು ತೋರಿದವರು**
**ಕವಿ ಸಾಹಿತಿಯಾದರೂ ನಾಡು ನುಡಿಗಾಗಿ**
**ನೋವುಂಡವರ ನಲಿವಿಗಾಗಿ ಬೀದಿಗಿಳಿದು**
**ಹೋರಾಡಿದವರು**
**ನಡುದಾರಿಯಲಿ ದ್ರೋಹ ಬಗೆದವರ**
**ದಾರಿ ಸುಗಮವಾಗಲಿ ಎಂದು ಹರಸಿದವರು**
**ಬೆನ್ನಿಗೆ ಇರಿದವರ ಚೂರಿಗೆ ಸಿಹಿ ಬೆಲ್ಲ ಸವರಿದವರು.**

●